## ಅರುಣೋದಯದ ನಿರೀಕ್ಷೆಯಲ್ಲಿ...

'ಸ್ವಾತಂತ್ರ್ಯ ಮತ್ತು ಸ್ವಚ್ಛಂದದ ನಡುವಿನ ಗೆರೆ ಅತ್ಯಂತ ತೆಳುವಾದುದು. ಇವೆರಡರ ನಡುವಣ ವ್ಯತ್ಯಾಸದ ವಿಶ್ಲೇಷಣೆಯೇ ನಮ್ಮ ಸಿನಿಮಾದ ಕಥೆ'. ಇದು ಬಿಡುಗಡೆಗೆ ಸಿದ್ಧವಾಗಿರುವ (ಅ. 9ರಂದು ತೆರೆಗೆ) 'ರಿಂಗ್ ಮಾಸ್ಟರ್' ಚಿತ್ರವನ್ನು ನಿರ್ದೇಶಕ ವಿಶ್ರುತ್ ನಾಯಕ್ ಅವರು ಬಣ್ಣಿಸಿದ ಬಗೆ. ಕಥೆಯಷ್ಟೇ ಗಮನಸೆಳೆಯುವ ಮತ್ತೊಂದು ಅಂಶ, ಈ ಚಿತ್ರದಲ್ಲಿ ಅರುಣ್ ಸಾಗರ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ ಎನ್ನುವುದು.

ಕನ್ನಡ ಚಿತ್ರರಂಗದ ಪ್ರತಿಭಾವಂತ ಕಲಾವಿದರಲ್ಲಿ ಅರುಣ್ ಸಾಗರ್ ಒಬ್ಬರು. 'ಅರುಣ್ ಸಾಗರ್ ಅದ್ಭುತ ಕಲಾಕಾರ' ಎನ್ನುವುದು ರವಿಚಂದ್ರನ್ ಶ್ಲಾಘನೆ. 'ಅವನ ಕಾಲು ಒಂದು ಕಡೆ ನಿಲ್ಲೊಲ್ಲ' ಎಂದು ಅರುಣ್ ದೌರ್ಬಲ್ಯವನ್ನೂ ರವಿಚಂದ್ರನ್ ಗುರ್ತಿಸಿದ್ದಾರೆ. ಹೀಗೆ, ಚಲನಶೀಲತೆಯನ್ನೇ ತನ್ನ ಶಕ್ತಿ ಮತ್ತು ಮಿತಿಯಾಗುಳ್ಳ ಅರುಣ್ ಅವರಿಗೆ 'ರಿಂಗ್ ಮಾಸ್ಟರ್' ಬಗ್ಗೆ ಅಪಾರ ನಿರೀಕ್ಷೆಗಳಿವೆ. ಒಳ್ಳೆಯ ಸಿನಿಮಾಗಳು ಹೆಚ್ಚುತ್ತಿರುವ ಮತ್ತು ಗೆಲ್ಲುತ್ತಿರುವ ದಿನಗಳಲ್ಲಿ ತಮ್ಮ ಚಿತ್ರ ಪ್ರೇಕ್ಷಕರಿಗೆ ಇಷ್ಟವಾಗಬಹುದು ಎನ್ನುವ ನಿರೀಕ್ಷೆ ಅವರದು.

'ಜೋಕರ್' ಸಿನಿಮಾ ನಿಂತುಹೋದ ಬೇಸರದಲ್ಲಿದ್ದ ಅರುಣ್ ಅವರಿಗೆ, ಆ ಕೊರತೆಯನ್ನು ತುಂಬಿಕೊಡುವ ರೀತಿಯಲ್ಲಿ 'ರಿಂಗ್ ಮಾಸ್ಟರ್' ಕಾಣಿಸಿದೆ. ಈ ಸಿನಿಮಾ ರೂಪುಗೊಳ್ಳುವಲ್ಲಿ ಬೆನ್ನಿಗೆ ನಿಂತ ಗೆಳೆಯರ ಗುಂಪಿನ ಬಗ್ಗೆ ಅವರಿಗೆ ಕೃತಜ್ಞತಾ ಭಾವವಿದೆ. 'ವಿಶ್ರುತ್ ಹೇಳಿದ ಕಥೆ ತುಂಬಾ ಇಷ್ಟವಾಯಿತು. ಸಿನಿಮಾ ಕೂಡ ಅಷ್ಟೇ ಚೆನ್ನಾಗಿ ಮೂಡಿಬಂದಿದೆ' ಎನ್ನುವ ಅವರು, 'ನಮ್ಮದು ಕಮರ್ಷಿಯಲ್ ಸಿನಿಮಾ ಅಲ್ಲ, ಪ್ರಯೋಗಾತ್ಮಕ ಸಿನಿಮಾ' ಎನ್ನುತ್ತಾರೆ.

ಕಿರುತೆರೆಯಲ್ಲಿ ಅರುಣ್ ಜೊತೆ ಅನೇಕ ವೇದಿಕೆಗಳನ್ನು ಹಂಚಿಕೊಂಡಿರುವ ಅನುಶ್ರೀ 'ರಿಂಗ್ ಮಾಸ್ಟರ್'ನ ನಾಯಕಿ. ಶೃಂಗ ಮತ್ತು ಶ್ವೇತಾ ಕೂಡ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರಂತೆ.




## 'ರಿಕ್ಕಿ' ಹರಿಪ್ರಿಯಾಗೆ ಲಕ್ಕಿ?

'ರಿಕ್ಕಿ' ಚಿತ್ರದಲ್ಲಿನ ನಟನೆಗಾಗಿ ಹರಿಪ್ರಿಯಾ ಅವರಿಗೆ ರಾಜ್ಯಪ್ರಶಸ್ತಿ ಬರಲಿದೆಯೇ? ಹೌದು ಎನ್ನುವುದು 'ರಿಕ್ಕಿ' ಚಿತ್ರತಂಡದ ಬಹುತೇಕರ ಅನಿಸಿಕೆ. ಚಿತ್ರದಲ್ಲಿ ನಟಿಸಿರುವ ಪ್ರಮೋದ್ ಶೆಟ್ಟಿ ಅವರಿಗಂತೂ ಹರಿಪ್ರಿಯಾ ಅವರಿಗೆ ಪ್ರಶಸ್ತಿ ದೊರೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ನಿರ್ದೇಶಕ ರಿಷಬ್ ಶೆಟ್ಟಿ ಅವರಿಗೂ ತಮ್ಮ ಚಿತ್ರದ ನಾಯಕಿಯ ನಟನೆ ಖುಷಿ ಕೊಟ್ಟಿದೆ, 'ನನ್ನ ನಿರೀಕ್ಷೆಗಿಂತಲೂ ಅದ್ಭುತವಾಗಿ ನಟಿಸಿದ್ದಾರೆ' ಎನ್ನುವುದು ಅವರ ಮೆಚ್ಚುಗೆ.

ಚಿತ್ರತಂಡದ ಪ್ರಶಂಸೆ ಹರಿಪ್ರಿಯಾ ಅವರಿಗೆ ಪ್ರಶಸ್ತಿ ದೊರೆತಷ್ಟೇ ಖುಷಿಕೊಟ್ಟಿದೆ. ಪರಸ್ಪರ ವಿರೋಧಾಭಾಸದ ವ್ಯಕ್ತಿತ್ವಗಳಂತೆ ಕಾಣಿಸುವ ರಾಧಾ – ಸೀತಾ ಪಾತ್ರಗಳ ನಿರ್ವಹಣೆ ಅವರಿಗೆ ಕಲಾವಿದೆಯಾಗಿ ತೃಪ್ತಿ ಕೊಟ್ಟಿದೆಯಂತೆ. ನಿರ್ದೇಶಕರು ಕಥೆ ಹೇಳುವಾಗಲೇ ಕಣ್ಣೀರು ಸುರಿಸಿದ್ದ ಅವರು, ಚಿತ್ರದಲ್ಲಿ ಗ್ಲಿಸರಿನ್ ಇಲ್ಲದೇನೆ ಕಣ್ಣೀರು ಸುರಿಸಿದ್ದಾರಂತೆ. 'ಆರಂಭದಲ್ಲಿ ಸುಲಭ ಎನ್ನಿಸಿದ್ದ ಪಾತ್ರ ಬರಬರುತ್ತಾ ತುಂಬಾ ಕಠಿಣವಾಯಿತು' ಎನ್ನುತ್ತಾರೆ ಹರಿಪ್ರಿಯಾ.

ಕಳೆದ ವಾರ ಬಿಡುಗಡೆಯಾದ, ಎಸ್.ವಿ. ಬಾಬು ನಿರ್ಮಿಸಿರುವ 'ರಿಕ್ಕಿ' ಚಿತ್ರದ ಟ್ರೈಲರ್ ಗಾಂಧಿನಗರದಲ್ಲಿ ಕುತೂಹಲ ಮೂಡಿಸಿದೆ. ನಕ್ಸಲಿಸಂ ಕಥೆಯನ್ನು ನಿರ್ದೇಶಕ ರಿಷಬ್ ಶೆಟ್ಟಿ ತುಂಬಾ ಸೂಕ್ಷ್ಮವಾಗಿ ಚಿತ್ರದಲ್ಲಿ ನಿರೂಪಿಸಿದ್ದಾರಂತೆ. ತಲ್ಲಣದ ಈ ಕಥೆಯೊಂದಿಗೆ ನವಿರು ಪ್ರೇಮದ ಕಥನವೂ ಚಿತ್ರದಲ್ಲಿದೆ. ಟ್ರೈಲರ್ ಬಿಡುಗಡೆ ಮಾಡಿದ ಪುನೀತ್ ರಾಜಕುಮಾರ್ ಚಿತ್ರತಂಡದ ಪ್ರಯತ್ನವನ್ನು ಕೊಂಡಾಡಿದರು. 'ಕನ್ನಡ ಚಿತ್ರರಂಗಕ್ಕೆ ಇದೊಂದು ವಿಶಿಷ್ಟ ಕೊಡುಗೆಯಾಗುವ ಲಕ್ಷಣಗಳು ಕಾಣಿಸುತ್ತಿವೆ' ಎನ್ನುವ ಅವರ ಮಾತಿನಲ್ಲಿ 'ರಿಕ್ಕಿ'ಯ ಬಗ್ಗೆ ಆಶಾವಾದ ಇತ್ತು. ಈಚಿನ ದಿನಗಳಲ್ಲಿ ಹೆಚ್ಚುತ್ತಿರುವ ಪ್ರಯೋಗಶೀಲ ಚಿತ್ರಗಳ ಸಾಲಿಗೆ 'ರಿಕ್ಕಿ' ಸೇರ್ಪಡೆಯಾಗುವ ಆಶಯವೂ ಅವರ ಮಾತಿನಲ್ಲಿತ್ತು.

ರಕ್ಷಿತ್ ಶೆಟ್ಟಿ, ವೀಣಾ ಸುಂದರ್, ಅಚ್ಯುತ ಕುಮಾರ್, ಸಾಧುಕೋಕಿಲಾ, ರವಿ ಕಾಳೆ ಅವರಂಥ ಅನುಭವಿ ನಟರು 'ರಿಕ್ಕಿ'ಯ ತಾರಾಗಣದಲ್ಲಿದ್ದಾರೆ. ನಟ ಸುದೀಪ್ ಹಿನ್ನೆಲೆ ಧ್ವನಿ ನೀಡಿರುವುದು ಹಾಗೂ ಅರ್ಜುನ್ ಜನ್ಯ ಸಂಗೀತ ಚಿತ್ರದ ವಿಶೇಷಗಳಲ್ಲಿ ಸೇರಿವೆ.

■ ರಘು

